ವಿಷಯ : ಸರ್ಕಾರಿ ನೌಕರರ ಸಂಬಳ ಮತ್ತು ಭತ್ಯದ ವಿವರ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 174 (681)

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):- ಮಾನ್ಯ ಮುಖ್ಯಮಂತ್ರಿಯವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿ ತಿಂಗಳು ರಾಜ್ಯಸರ್ಕಾರ ತನ್ನ ನೌಕರರಿಗೆ ಕೊಡುತ್ತಿರುವ ಸಂಬಳ ಮತ್ತು ಇತರೆ ಭತ್ಯೆಗಳು ಎಷ್ಟು ?

ಆ) ಸರ್ಕಾರಿ ಸೇವೆಯಿಂದ ನಿವೃತ್ತರಾದ ನೌಕರರಿಗೆ ಪ್ರತಿ ತಿಂಗಳು ಕೊಡುತ್ತಿರುವ ಪಿಂಚಣಿ ಹಣ ಎಷ್ಟು ?

ಇ) ಇವುಗಳನ್ನು ಹೆಚ್ಚು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ?

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ) 1994-95 ಆಯವ್ಯಯ ಅಂದಾಜುಗಳಂತೆ (ಖಾಲಿ ಹುದ್ದೆಗಳನ್ನು ಹೊರತುಪಡಿಸಿ) ಪ್ರತಿ ತಿಂಗಳು, ರಾಜ್ಯ ಸರ್ಕಾರವು ತನ್ನ ನೌಕರರಿಗೆ ಕೊಡುತ್ತಿರುವ ಸಂಬಳ ಮತ್ತು ಇತರೆ ಭತ್ಯೆಗಳ ಮೇಲೆ 181.80 ಕೋಟಿ ರೂಪಾಯಿಗಳ ಸರಾಸರಿ ವೆಚ್ಚವನ್ನು ಭರಿಸುತ್ತಿದೆ.

ಆ) 1994-95ರ ಆಯವ್ಯಯ ಅಂದಾಜುಗಳಂತೆ ಪ್ರತಿ ತಿಂಗಳು, ರಾಜ್ಯಸರ್ಕಾರವು, ಸರ್ಕಾರಿ ಸೇವೆಯಿಂದ ನಿವೃತ್ತರಾದ ನೌಕರರಿಗೆ ಕೊಡುತ್ತಿರುವ ಪಿಂಚಣಿ ಸೌಲಭ್ಯಗಳ ಮೇಲೆ 38.91 ಕೋಟಿ ರೂಪಾಯಿಗಳ ಸರಾಸರಿ ವೆಚ್ಚವನ್ನು ಭರಿಸುತ್ತಿದೆ.

ಇ) 4ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಆಧರಿಸಿ ರಾಜ್ಯಸರ್ಕಾರವು, ದಿನಾಂಕ : 1-7-1993ರಿಂದ ಜಾರಿಗೆ ಬರುವಂತೆ ತತ್ಸಮಾನ ಪರಿಷ್ಕೃತ ವೇತನ ಶ್ರೇಣಿಗಳನ್ನು ನೀಡಿ, ಈಗಾಗಲೇ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸಿದೆ ಮತ್ತು ದಿನಾಂಕ : 1-1-1982ಕ್ಕಿಂತ ಮುಂಚೆ ನಿವೃತ್ತರಾದವರಿಗೆ ದಿನಾಂಕ : 1-4-94ರಿಂದ ಜಾರಿಗೆ ಬರುವಂತೆ ನಿವೃತ್ತಿ ವೇತನವನ್ನು ಹೆಚ್ಚಿಸಿ ಆದೇಶಗಳನ್ನು ಹೊರಡಿಸಿದೆ. ಆಯೋಗದ ಶಿಫಾರಸ್ಸುಗಳ ಉಳಿದ ಅಂಶಗಳನ್ನು ಪರಿಶೀಲಿಸಲು ಹಾಗೂ ಸರ್ಕಾರಕ್ಕೆ ವರದಿ ನೀಡಲು ಪದೀಯ ಸಮಿತಿಯೊಂದನ್ನು ರಚಿಸಲಾಗಿದೆ. ಆ ಸಮಿತಿಯ ವರದಿಯ ಆಧಾರದ ಮೇಲೆ ಸರ್ಕಾರವು ಮುಂದಿನ ಕ್ರಮ ಕೈಗೊಳ್ಳುವುದು.

ದಿನಾಂಕ 6.9.94ರ ಚುಕ್ಕೆಗುರುತಿಲ್ಲದ ಪ್ರಶ್ನೋತ್ತರಗಳು.

ವಿಷಯ : ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ನಿಲ್ದಾಣಗಳಲ್ಲಿ ನಾಗರೀಕ ಸೌಲಭ್ಯಗಳ ಕೊರತೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 417 (430)

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬಹುತೇಕ ಬಸ್ ನಿಲ್ದಾಣಗಳಲ್ಲಿ ಸಾರ್ವಜನಿಕ ಸೌಲಭ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ ಶೌಚಾಲಯಗಳ ನಿರ್ವಹಣೆ, ವಿಶ್ರಾಂತಿ ಕೊಠಡಿ ಇವುಗಳನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ನಿರ್ವಹಣೆ ಮಾಡುತ್ತಿರುವುದನ್ನು ಸರ್ಕಾರ.ಗಮನಿಸಿದೆಯೆ ;

ಆ) ರಾಜ್ಯದಲ್ಲಿ ಬಹುತೇಕ ಬಸ್ ನಿಲ್ದಾಣಗಳಲ್ಲಿ ಕಳಪೆ ದರ್ಜೆಯ ಮೇಲ್ಛಾವಣಿಗಳನ್ನು ಉಪಯೋಗಿಸುತ್ತಿರುವುದರಿಂದ ಬೇಸಿಗೆ ಮತ್ತು ಮಳೆಗಾಲ ಎರಡರಲ್ಲಿಯೂ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೆ ;

ಇ) ರಾಜ್ಯರಸ್ತೆ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಅಗತ್ಯವಿರುವ ಸೌಲಭ್ಯಗಳ ನಿರ್ವಹಣೆಯನ್ನು ಉತ್ತಮಪಡಿಸುವುದರ ಜೊತೆಗೆ ನೈರ್ಮಲ್ಯವನ್ನು ಕಾಪಾಡಿಕೊಂಡು ಬರಲು ಸರ್ಕಾರ ಒಂದು ಸಮಗ್ರ ಯೋಜನೆಯನ್ನೇನಾದರೂ ರೂಪಿಸುವುದೇ?

ಶ್ರೀ. ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ) ಹೌದು.

ಆ) ಹೌದು.

ಇ) ಹೌದು.

ವಿಷಯ : ಖಾಸಗಿ ಪಶುವೈದ್ಯರಿಗೆ ಮಾಸಾಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 418 (770(ಎ))

ಡಾ : ವೈ. ನಾಗಪ್ಪ (ಹರಿಹರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಯುರ್ವೇದ ಮತ್ತು ಯುನಾನಿ ವೈದ್ಯಕೀಯ ಚಿಕಿತ್ಸೆಯಲ್ಲಿ ವಿಶೇಷ ಪರಿಣತಿಯನ್ನು ಹೊಂದಿ ಖಾಸಗಿಯಾಗಿ ಉಚಿತವಾಗಿ ವೈದ್ಯಕೀಯ ಉಪಚಾರ ಮಾಡುವ ವ್ಯಕ್ತಿಗಳಿಗೆ ಮಾಶಾಸನ ನೀಡುವ ರೀತಿಯಲ್ಲೇ ಗ್ರಾಮೀಣ ಪ್ರದೇಶದಲ್ಲಿ ದನಕರುಗಳಿಗೆ ಪಶು ವೈದ್ಯಕೀಯ ಚಿಕಿತ್ಸೆಯನ್ನು ಖಾಸಗಿಯಾಗಿ ಉಚಿತವಾಗಿ ನೀಡುವ ಅರ್ಹ ವೈದ್ಯರಿಗೆ ಕೂಡಾ ಮಾಶಾಸನ ನೀಡುವ ಬಗ್ಗೆ ಸರ್ಕಾರ ಅಗತ್ಯ ಕ್ರಮಕ್ಕೈಗೊಳ್ಳುವುದೆ ?

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):-

ಅ) ಅಂಥಹ ಅರ್ಹ ಖಾಸಗಿ ವ್ಯಕ್ತಿಗಳಿಂದ ಬೇಡಿಕೆ ಬಂದಲ್ಲಿ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ನಿಂದ ಅವಶ್ಯಕ ಮಾಹಿತಿ ಪಡೆದು ಪರಿಶೀಲಿಸಲಾಗುತ್ತದೆ.